
ಕಲಿಯುವ ಕಲೆ.....

# ಸುಂದರಬನ



ಗೋವಾದ ಮಂಗೇಶಿ ದೇವಸ್ಥಾನದ ದೀಪ ಸ್ತಂಭ. – ಧ್ವನಿ ಫೋಟೋ

**ಶಿಕ್ಷಕರು/ಮಕ್ಕಳು/ಪಾಲಕರಲ್ಲಿ ನಿವೇದನೆ:** ‘ಸುಂದರಬನ’ದಲ್ಲಿ ಸುಂದರ ಕಲಿಕಾ ಅನುಭವ ಪಡೆಯಲು ಮೊದಲು ಬೆನ್ನುಪುಟ ಮತ್ತು ಆಯಾ ಪುಟಗಳಲ್ಲಿ ಕೊಟ್ಟಿರುವ ‘ನಮ್ಮ ಆಶಯ’ವನ್ನು ತಾವು ಗಮನಿಸಿ. ಆ ಪ್ರಕಾರ ಚಟುವಟಿಕೆಗಳನ್ನು ಮಾಡಿರಿ/ಮಾಡಿಸಿರಿ.

ವಿದ್ಯಾರ್ಥಿ/ವಿದ್ಯಾರ್ಥಿನಿಯ ಹೆಸರು:....................................

ಶಾಲೆಯ ಹೆಸರು:....................................


ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

ನವೆಂಬರ್ – ಡಿಸೆಂಬರ್ ೨೦೨೪ – ೨೫

ಪೂರಣ ಯೋಜನೆ
Poorana 2024-25 Project
is Supported by Many
Individual Donors

# ಚಿತ್ರ ಬರಹ







ಖುಷಿ ಕಲಿಕೆಗಾಗಿ

**ಭಾಷಾ ಚೌಕ**

**ಕಲ್ಲು – Stone** (ಸ್ಟೋನ್)
**ಸಹೋದರ – Brother** (ಬ್ರದರ್)
**ಮಗಳು – Daughter** (ಡಾಟರ್)
**ಹುಲ್ಲು – Grass** (ಗ್ರಾಸ್)

**ನಮ್ಮ ಆಶಯ:** ಮೇಲಿನ ಚಿತ್ರಗಳ ಕುರಿತು ನಿನಗೆ ಅನಿಸಿದ್ದನ್ನು ನಾಲ್ಕೈದು ಸಾಲು ಬರೆ. ನಂತರ ಅವುಗಳಿಗೆ ಸೂಕ್ತವಾದ ಶೀರ್ಷಿಕೆ/ತಲೆಬರಹವನ್ನು ಕೊಡು.

# ನಗು ನಗಿಸು

**ಪೆದ್ದಗುಂಡ:** ಡಾಕ್ಟ್ರೇ, ಈ ಬಕೆಟ್ ಸಿಕ್ಕಾ ಪಟ್ಟೆ ಸೋರುತಿದೆ...... ರಿಪೇರಿ ಮಾಡಿಕೊಡ್ತೀರಾ?

**ಡಾಕ್ಟರ್:** ಮೂರ್ಖ.... ನಾನ್ಯಾರೂ ಅಂತ ಗೊತ್ತಿದೆಯಾ ನಿಂಗೆ?

**ಪೆದ್ದಗುಂಡ:** ಗೊತ್ತು ಡಾಕ್ಟ್ರೇ ನೀವು ಪ್ಲಾಸ್ಟಿಕ್ ಸರ್ಜರಿಯಲ್ಲಿ ಫೇಮಸ್ ಅಲ್ವಾ?



*

**ಕನ್ನಡ ಶಿಕ್ಷಕ:** 'ಕ' ಇರೋದು 'ಕೊ' ಆಗಬೇಕಾದರೆ ಕೊಂಬು ಕೊಡಬೇಕು, ಅರ್ಥ ಆಯ್ತಾ ಮಕ್ಕಳೆ

**ಪೆದ್ದಗುಂಡ:** ಹಾಗಾದ್ರೆ 'ಚ' ಇರೋದು 'ಚೊ' ಆಗಬೇಕಾದರೆ ಚೊಂಬು ಕೊಡಬೇಕಾ ಸಾರ್...

**ಶಿಕ್ಷಕಿ:** ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?

**ಪೆದ್ದಗುಂಡ:** ಯಾಕಾಗಲ್ಲ ಟೀಚರ್? ಚಿಕ್ಕ ವಯಸ್ಸಿನಲ್ಲಿ ಬಗ್ಗದ ನಮ್ಮ ಅಜ್ಜ ಈಗ ತುಂಬಾ ಬಗ್ಗಿದ್ದಾನೆ!!!

*

**ಮೊಮ್ಮಗ:** ಅಜ್ಜ, ನಿಮ್ಮ ಪೆನ್ಷನ್ನಿಂದ ನಂಗೆ ೫೦೦ ರೂ. ಸಾಲ ಕೊಡಿ ಅಜ್ಜಾ......

**ಅಜ್ಜ:** ಯಾವಾಗ ವಾಪಸ್ ಕೊಡ್ತಿ?

**ಮೊಮ್ಮಗ:** ನಂಗೆ ಪೆನ್ಷನ್ ಬರುವಾಗ!

ಖುಷಿ ಕಲಿಕೆಗಾಗಿ

**ನಮ್ಮ ಆಶಯ:** ಕೊಟ್ಟಿರುವ ನಗೆ ಹನಿಗಳನ್ನು ಸ್ನೇಹಿತರೊಂದಿಗೆ ಓದಿ ಆನಂದಿಸು. ಇಂತಹ ಇನ್ನಷ್ಟು ನಗೆಹನಿಗಳನ್ನು ಸಂಗ್ರಹಿಸಿ ಓದು.

# ಬಣ್ಣದಾಟ



..............................................................................................

___________________________________________

___________________________________________

___________________________________________

___________________________________________

___________________________________________

___________________________________________

___________________________________________

___________________________________________

ಸಾಂದರ್ಭಿಕ ಕಲಿಕೆಗಾಗಿ

**ನಮ್ಮ ಆಶಯ:** ಮೇಲಿನ ಚಿತ್ರದಲ್ಲಿನ ಹಿರಿಯರನ್ನು ಗುರುತಿಸು. ನಂತರ ಶಿಕ್ಷಕರ/ಪೋಷಕರ ಸಹಾಯದಿಂದ ಅವರ ಕುರಿತು ಮಾಹಿತಿ ಸಂಗ್ರಹಿಸಿ ಕೊಟ್ಟಿರುವ ಗೆರೆಯ ಮೇಲೆ ಬರೆ. ಅನಂತರ ತರಗತಿಯಲ್ಲಿ ಮಾತನಾಡು.

# ಕಣ್ಣುರುಕು





ಸಾಂದರ್ಭಿಕ ಚಿತ್ರಗಳು

**ಭಾಷಾ ಚೌಕ**

**ಹಬ್ಬ – Festival** (ಫೆಸ್ಟಿವಲ್)
**ಆಚರಣೆ – Celebration** (ಸೆಲೆಬ್ರೇಷನ್)
**ಬಣ್ಣ – Colour** (ಕಲರ್)
**ಕುಂಚ – Brush** (ಬ್ರಷ್)
**ಉಡುಗೊರೆ – Gift** (ಗಿಫ್ಟ್)

**ನಮ್ಮ ಆಶಯ:** ಮೇಲಿನ ಚಿತ್ರಗಳು ನೋಡುವುದಕ್ಕೆ ಒಂದೇ ತರಹ ಕಂಡರೂ ಅವುಗಳಲ್ಲಿ ಎಂಟಕ್ಕಿಂತಲೂ ಹೆಚ್ಚು ವ್ಯತ್ಯಾಸಗಳಿವೆ. ಅವುಗಳನ್ನು ಗುರುತಿಸಿ, ಬಣ್ಣ ತುಂಬು. ನಂತರ ಹಬ್ಬದ ಆಚರಣೆ ಕುರಿತು ತರಗತಿಯಲ್ಲಿ ಮಾತನಾಡು.

# ಭಾಷಾ ಚಟುವಟಿಕೆ

**ಕಥೆ–೧**

ಒಬ್ಬ ಹುಡುಗ ಇದ್ದನು. ಒಂದು ದಿನ ಅವನು ಯಾವುದಾದರೂ ಸ್ಥಳಕ್ಕೆ ಪ್ರವಾಸಕ್ಕೆ ಹೋಗೋಣ ಎಂದುಕೊಂಡನು. ಎಲ್ಲಿಗೆ ಹೋಗುವುದು ಎಂದು ಯೋಚಿಸಿದ. ಆಗ ಅವನಿಗೆ ನೆನಪಾಗಿದ್ದು ತನ್ನ ಊರಿನ ಹತ್ತಿರದ್ದಲ್ಲಿದ್ದ ಕಾಡು ಮತ್ತು ನದಿ. ನದಿಯ ಪಕ್ಕದಲ್ಲಿ ಇದ್ದ ದೊಡ್ಡ ದೇವಸ್ಥಾನ. ಸರಿ ಅಲ್ಲಿಗೇ ಹೋಗೋಣ ಎಂದು ನಿರ್ಧರಿಸಿದ. ಪ್ರವಾಸಕ್ಕೆ ಹೋಗುವ ಸಿದ್ಧತೆಯನ್ನು ಮಾಡಿಕೊಂಡ. ತಿಂಡಿ ತಿನಿಸು ನೀರನ್ನು ತನ್ನ ಚೀಲದಲ್ಲಿ ತುಂಬಿಕೊಂಡ. ಸೈಕಲ್‌ನ್ನು ಒರೆಸಿ ಅದಕ್ಕೆ ಎಣ್ಣೆ, ಗ್ರೀಸ್ ಹಾಕಿ ಸಿದ್ಧಪಡಿಸಿಕೊಂಡ. ನಂತರ ತನ್ನ ತಂದೆ ತಾಯಿಗೆ ಹೇಳಿ ಸೈಕಲ್‌ನ್ನು ಹತ್ತಿ ಹೊರಟ.

ದಾರಿಯಲ್ಲಿ ಹೋಗುವಾಗ ಅವನಿಗೆ ನವಿಲು ಕುಣಿಯುತ್ತಿದ್ದುದು ಕಾಣಿಸಿತು. ಅದರ ಕುಣಿತ ನೋಡಿ ಅವನು ತುಂಬಾ ಖುಷಿಪಟ್ಟನು. ಹಾಗೇ ಮುಂದೆ ಹೊರಟ ಅಲ್ಲಿ ಜಿಂಕೆಯೊಂದು ಓಡುತ್ತಿರುವುದು ಕಾಣಿಸಿತು. ಕೋಗಿಲೆಯ ಕುಹೂ ಕುಹೂ ಧ್ವನಿ ಆತನ ಗಮನವನ್ನು ಸೆಳೆಯಿತು. ಅವನೂ ಆ ಕೋಗಿಲೆ ತರಹ ಕೂಗುತ್ತಾ ಮುಂದೆ ಹೊರಟ. ಹೀಗೆ ದಾರಿಯುದ್ದಕ್ಕೂ ಇತಂಹ ವಿಸ್ಮಯವನ್ನು ನೋಡುತ್ತಾ ನದಿ ತೀರವನ್ನು ದೇವಸ್ಥಾನವನ್ನು ತಲುಪಿದ. ಅಲ್ಲಿನ ಸೌಂದರ್ಯವನ್ನು ನೋಡಿ ಮೆಚ್ಚಿದ. ನದಿಯಲ್ಲಿ ಮೀನು, ಹಾವು, ಏಡಿಯನ್ನು ನೋಡಿದ. ನದಿ ದಡದಲ್ಲಿ ಕುಳಿತು ನೀರಿನಲ್ಲಿ ಆಟವಾಡಿದ. ಅಂದು ಅವನಿಗೆ ಅತ್ಯಂತ ಸಂತೋಷವಾಗಿತ್ತು. ಅಲ್ಲಿ ಪಕ್ಕದ ಮರದಲ್ಲಿದ್ದ ನೇರಳೆ ಹಣ್ಣನ್ನು ಕಿತ್ತು ತಿಂದ. ಸಂಜೆ ಕತ್ತಲಾಗುತ್ತಿದ್ದಂತೆ ಮರಳಿ ಮನೆಗೆ ಬಂದ. ಮಾರನೇ ದಿನ ಶಾಲೆಯಲ್ಲಿ ತನ್ನ ಗೆಳೆಯ/ಗೆಳತಿಗೆ ತನ್ನ ಹಿಂದಿನ ದಿನದ ಕಿರುಪ್ರವಾಸದ ಅನುಭವವನ್ನು ಹಂಚಿಕೊಂಡ. *

**ರಚನೆ: ಶ್ರೀನಿವಾಸ, ಧ್ವನಿ ಬಳಗ**


**ಕಥೆ–೨**

ಕೆಲವು ಹುಡುಗರು ಇದ್ದರು. ಒಂದು ದಿನ ಅವರು ಯಾವುದಾದರೂ ಸ್ಥಳಗಳಿಗೆ ಪ್ರವಾಸಕ್ಕೆ ಹೋಗೋಣ ಎಂದುಕೊಂಡರು. ಎಲ್ಲಿಗೆ ಹೋಗುವುದು ಯೋಚಿಸಿದರು. ಆಗ ಅವರಿಗೆ ನೆನಪಾದದ್ದು ತಮ್ಮ ಊರಿನ ಹತ್ತಿರದಲ್ಲಿದ್ದ ಕಾಡು ಮತ್ತು ನದಿಗಳು. ನದಿಯ ಪಕ್ಕದಲ್ಲಿ ಇದ್ದ ದೇವಸ್ಥಾನಗಳು. ಸರಿ ಅಲ್ಲಿಗೇ......



**ನಮ್ಮ ಆಶಯ:** ಕಥೆ ೧ನ್ನು ಮೊದಲು ಓದಿಕೊ. ನಂತರ ಕಥೆ ೧ರಲ್ಲಿನ ಒಬ್ಬ ವ್ಯಕ್ತಿ, ಒಂದು ವಸ್ತು, ಒಂದು ಪ್ರಾಣಿ, ಒಂದು ಸ್ಥಳ (ಹೆಸರು ಪದ) ಮತ್ತು ಒಂದು ಕೆಲಸ ಹೀಗೆ 'ಏಕವಚನ' ಸೂಚಿಸುವ ಪದಗಳ ಕೆಳಗೆ ಗೆರೆ ಎಳೆದು ಗುರುತಿಸು. ಅನಂತರ ಅವುಗಳಿಗೆ ಬಹುವಚನ ಪ್ರತ್ಯಯ ಸೇರಿಸಿ ಕಥೆ ೨ನ್ನು ಪೂರ್ಣಗೊಳಿಸು. ಆಮೇಲೆ ಅದನ್ನೇ ಕೆಳಗೆ ಬರೆ. ಈ ಅನುಭವದ ಬಗ್ಗೆ ಶಿಕ್ಷಕರು/ಗೆಳೆಯರು/ಹಿರಿಯರೊಂದಿಗೆ ಚರ್ಚಿಸು.

# ಮಂಡಲ ಕಲೆ



ಖುಷಿ ಕಲಿಕೆಗಾಗಿ

**ನಮ್ಮ ಆಶಯ:** ಕೊಟ್ಟಿರುವ ಚಿತ್ರವನ್ನು ಗಮನಿಸು. ಅದಕ್ಕೆ ಸೂಕ್ತ ಬಣ್ಣ ಹಚ್ಚು. ನಂತರ ನಿನ್ನ ಅನುಭವವನ್ನು ಗೆರೆ ಮೇಲೆ ಬರೆ.


# ಒಂದು ಸವಾಲು


## ವಿವಿಧ ಘನ ವಸ್ತುಗಳ ಸಾಂದ್ರತೆ

**ನಮ್ಮ ಆಶಯ:** ಅಳತೆ ಪಟ್ಟಿ ಮತ್ತು ತಕ್ಕಡಿಯ ಸಹಾಯದಿಂದ ಕೊಟ್ಟಿರುವ ವಿವಿಧ ಘನಗಳ ವಸ್ತುಗಳ ಉದ್ದ, ಅಗಲ ಮತ್ತು ತೂಕವನ್ನು ಕೆಳಗೆ ಕೊಟ್ಟಿರುವ ಪಟ್ಟಿಯಲ್ಲಿ ದಾಖಲಿಸು. ಇನ್ನಷ್ಟು ಘನ ವಸ್ತುಗಳನ್ನು ಸಂಗ್ರಹಿಸು. ಅವುಗಳ ಉದ್ದ, ಅಗಲ ಮತ್ತು ತೂಕವನ್ನು ಬೇರೊಂದು ಹಾಳೆಯಲ್ಲಿ ಬರೆ. ಈಗ ಗಮನಿಸು. ವಿವಿಧ ವಸ್ತುಗಳು ವಿವಿಧ ರೀತಿಯ ಅಳತೆ ಮತ್ತು ತೂಕಗಳನ್ನು ಹೊಂದಿರುವುದು ಕಾಣಬಹುದು.

**ಅಳತೆಯ ಸಾಧನಗಳು**









| ಕ್ರ.ಸಂ. | ವಸ್ತು | ಉದ್ದ | ಅಗಲ | ತೂಕ |
|---|---|---|---|---|
| ೧ | ಕನ್ನಡ ಪಠ್ಯಪುಸ್ತಕ | | | |
| ೨ | ಇಟ್ಟಿಗೆ | | | |
| ೩ | ನೋಟ್‌ಬುಕ್ | | | |
| ೪ | ಪೆನ್ನು | | | |
| ೫ | ಊಟದ ತಟ್ಟೆ | | | |
| ೬ | ಮೊಬೈಲ್ | | | |
| ೭ | ಚಂಬು | | | |
| ೮ | ಕನ್ನಡಕ | | | |

# ಚುಕ್ಕಿಯಾಟ



ಖುಷಿ ಕಲಿಕೆಗಾಗಿ

**ನಮ್ಮ ಆಶಯ:** ಚುಕ್ಕಿಯಾಟದಲ್ಲಿ 1ರಿಂದ 125ರವರೆಗಿನ ಸಂಖ್ಯೆಗಳನ್ನು ಸೇರಿಸು. ನಂತರ ಮೂಡುವ ಚಿತ್ರಕ್ಕೆ ಬಣ್ಣ ತುಂಬು. ಇದರ ಕುರಿತು ತರಗತಿಯಲ್ಲಿ ಮಾತನಾಡು.

# ಬಣ್ಣದಾಟ



## ನನ್ನ ಮನೆ

ಮನೇ ಮನೇ ಮುದ್ದು ಮನೇ
ಮನೇ ಮನೇ ನನ್ನ ಮನೇ!

ನನ್ನ ತಾಯಿಯೊಲಿದ ಮನೆ,
ನನ್ನ ತಂದೆ ಬೆಳೆದ ಮನೆ:
ನನ್ನ ಗೆಳೆಯರೊಡನೆ ಕೂಡಿ
ಮುದ್ದು ಮಾತುಗಳನು ಆಡಿ
ಮಕ್ಕಳಾಟಗಳನ್ನು ಹೂಡಿ
ನಾನು ನಲಿದ ನನ್ನ ಮನೆ!

ತಾಯಿ ಮುತ್ತು ಕೊಟ್ಟ ಮನೆ,
ತಂದೆ ಎತ್ತಿಕೊಂಡ ಮನೆ:
ಮನೆಗೆ ಬಂದ ನೆಂಟರೆಲ್ಲ
ಕೂಗಿ ಕರೆದು ಕೊಬರಿ ಬೆಲ್ಲ–
ಗಳನು ಕೊಟ್ಟು ಸವಿಯ ಸೊಲ್ಲ
ನಾಡುತಿದ್ದ ನನ್ನ ಮನೆ!

ನಾನು ನುಡಿಯ ಕಲಿತ ಮನೆ,
ನಾನು ನಡಿಗೆಯರಿತ ಮನೆ:
ಹಕ್ಕಿ ಬಳಗ ಸುತ್ತ ಕೂಡಿ
ಬೈಗು ಬೆಳಗು ಹಾಡಿ ಹಾಡಿ
ಮಲೆಯನಾಡ ಸಗ್ಗ ಮಾಡಿ
ನಲಿಸುತಿದ್ದ ನನ್ನ ಮನೆ!

ನಾನು ಎದ್ದು ಬಿದ್ದ ಮನೆ
ಮೊದಲ ಬೆಳಕ ಕಂಡ ಮನೆ

**– ಕುವೆಂಪು**

**ನಮ್ಮ ಆಶಯ:** ಮೇಲೆ ಕೊಟ್ಟಿರುವ ಕುವೆಂಪು ಅವರ ಮನೆಯನ್ನು ಗಮನಿಸಿ, ಬಣ್ಣವನ್ನು ತುಂಬು. ಅವರು ರಚಿಸಿದ 'ನನ್ನ ಮನೆ' ಕವನದ ಆಯ್ದ ಭಾಗವನ್ನು ಕೊಡಲಾಗಿದೆ ಓದಿ ಆನಂದಿಸು. ನಂತರ ಖಾಲಿ ಜಾಗದಲ್ಲಿ ನಿನ್ನ ಕಲ್ಪನೆಯ ಮನೆ ಚಿತ್ರ ಬರೆದು ಬಣ್ಣ ತುಂಬು.

ವಸತಿಗಳು ಪಾಠಕ್ಕೆ ಪೂರಕ

| ಭಾಷಾ ಚೌಕ |
|---|
| ಮನೆ – **Home** (ಹೋಮ್) |
| ಬಾಗಿಲು – **Door** (ಡೋರ್) |
| ಕಿಟಕಿ – **Window** (ವಿಂಡೋ) |
| ಮಾಳಿಗೆ – **Roof** (ರೂಫ್) |
| ಮೆಟ್ಟಿಲು – **Staircase** (ಸ್ಟೇರ್‌ಕೇಸ್) |

# ಕಥೆ ಕಟ್ಟೋಣ ಬನ್ನಿ



ಕತ್ತೆ, ಅಳಿಲು, ಕೋಳಿ, ಕೆರೆ,
ಮನೆ, ಸ್ನೇಹಿತರು, ಮರ

**ನಮ್ಮ ಆಶಯ:** ಮೇಲಿನ ಚಿತ್ರವನ್ನು ಸರಿಯಾಗಿ ಗಮನಿಸು. ಅಲ್ಲಿರುವ ಪದಗಳನ್ನು ಬಳಸಿಕೊಂಡು ನಿನ್ನದೇ ಕಲ್ಪನೆಯ ಒಂದು ಕಥೆಯನ್ನು ಕಟ್ಟಿ ಹೇಳು. ನಂತರ ಆ ಕಥೆಯನ್ನು ನಿನ್ನ ಮಾತುಗಳಲ್ಲಿ ಕೊಟ್ಟಿರುವ ಗೆರೆಯ ಮೇಲೆ ಬರೆ. ಆ ಕಥೆಯನ್ನು ಧ್ವನಿಗೂ ಕಳುಹಿಸು.

**ಭಾಷಾ ಚೌಕ**

**ಅಳಿಲು** – **Squirrel** (ಸ್ಕ್ವಿರಲ್)
**ಕೋಳಿ** – **Hen** (ಹೆನ್)
**ಬೆನ್ನು** – **Spinal** (ಸ್ಪೈನಲ್)
**ಕೆರೆ** – **Lake** (ಲೇಕ್)

# ದ್ವಿಭಾಷಾ – ಪದಕೋಶ

**'ಕನ್ನಡ – ಇಂಗ್ಲೀಷ್' ಅರ್ಥಪಟ್ಟಿ ೧**

| ಕನ್ನಡ | ಇಂಗ್ಲೀಷ್ | ಕನ್ನಡ | ಇಂಗ್ಲೀಷ್ |
|---|---|---|---|
| ಸಿರಿಧಾನ್ಯ | Millet (ಮಿಲೆಟ್) | ಪರಿಹಾರ | Solution (ಸಲ್ಯೂಷನ್) |
| ಸ್ವಚ್ಛ | Clean (ಕ್ಲೀನ್) | ಪರಿಣಾಮ | Effect (ಎಫೆಕ್ಟ್) |
| ಪೋಷಕಾಂಶ | Nutrients (ನ್ಯೂಟ್ರಿಯಂಟ್ಸ್) | ಬೆಳೆ | Crop (ಕ್ರಾಪ್) |
| ಶಾಂತಿ | Peace (ಪಿಸ್) | ಗಾಳಿ | Air (ಏರ್) |
| ಬರ | Drought (ಡ್ರೌಟ್) | ಪಳೆಯುಳಿಕೆ | Fossil (ಫಾಸಿಲ್) |
| ಸಂರಕ್ಷಣೆ | Preservation (ಪ್ರಿಸರ್ವೇಶನ್) | ಪೂರ್ವ | East (ಈಸ್ಟ್) |
| ಆಶೀರ್ವಾದ | Blessing (ಬ್ಲೆಸಿಂಗ್) | ರೈತ | Farmer (ಫಾರ್ಮರ್) |
| ತೀರ್ಪು | Judgment (ಜಡ್ಜ್‌ಮೆಂಟ್) | ಕಾಡು | Forest (ಫಾರೆಸ್ಟ್) |

**'ಕನ್ನಡ – ಇಂಗ್ಲೀಷ್' ಅರ್ಥಪಟ್ಟಿ ೨**

| ಕನ್ನಡ | ಇಂಗ್ಲೀಷ್ | ಕನ್ನಡ | ಇಂಗ್ಲೀಷ್ |
|---|---|---|---|
| ಸಾಗರ | | ಲೇಖನ | |
| ಶಕ್ತಿ | | ಅಂಗಡಿ | |
| ಗೋಳ | | ಆರೋಗ್ಯ | |
| ಭೂಮಿ | | ಮಂತ್ರಿ | |
| ಮಾಲಿನ್ಯ | | ಪಕ್ಷಿಶಾಸ್ತ್ರ | |
| ಕಾಲ | | ಲೋಹ | |
| ಸುಳ್ಳು | | ಸಂಯುಕ್ತ | |
| ಕಾರ್ಖಾನೆ | | ಪಂಜರ | |

**ನಮ್ಮ ಆಶಯ:** ಮೇಲೆ ಕೊಟ್ಟಿರುವ 'ಕನ್ನಡ – ಇಂಗ್ಲೀಷ್' ಅರ್ಥಪಟ್ಟಿ ೧ ಗಮನಿಸು. ಅದರಲ್ಲಿ ಪರಿಸರ ಅಧ್ಯಯನಕ್ಕೆ ಸಂಬಂಧಿಸಿದ ಪದಗಳಿಗೆ ಇಂಗ್ಲೀಷ್ ಸಮಾನಾರ್ಥಕ ಪದಗಳನ್ನು ಕೊಡಲಾಗಿದೆ. ಓದಿ ಅರ್ಥಮಾಡಿಕೊ. ನಂತರ 'ಕನ್ನಡ – ಇಂಗ್ಲೀಷ್' ಅರ್ಥಪಟ್ಟಿ ೨ರಲ್ಲಿ ಕೇವಲ ಕನ್ನಡ ಪದಗಳನ್ನು ಕೊಡಲಾಗಿದೆ. ಅವುಗಳಿಗೆ ಇಂಗ್ಲೀಷ್ ಸಮಾನಾರ್ಥಕ ಪದಗಳನ್ನು ಬರೆ. ಅದಕ್ಕಾಗಿ ಉತ್ತಮ ಅರ್ಥಕೋಶದ ಸಹಾಯವನ್ನು ಪಡೆ.

# ಕೀರ್ತನೆ



ಸಾಂದರ್ಭಿಕ ಚಿತ್ರ

## ಜಪವ ಮಾಡಿದರೇನು

ಜಪವ ಮಾಡಿದರೇನು ತಪವ ಮಾಡಿದರೇನು
ವಿಪರೀತ ಕಪಟಗುಣ ಕಲುಷವಿದ್ದವರು

ಆದಿಗುರುವರಿಯದೆ ಅತ್ತಲಿತ್ತಲು ತೊಳಲಿ
ವೇದಶಾಸ್ತ್ರವನೋದಿ ಬಾಯಾರಲು
ಹಾದಿಯನು ಕಾಣದಂತಿರುತಿರ್ದು ಹಲವೆಂಟು
ವಾದ ತರ್ಕದೊಳಿದ್ದ ಭೇದವಾದಿಗಳು

ನುಡಿನಡೆವ ಕಾಲದಲಿ ದಾನವ ಮಾಡದೆ ಇರಲು
ಅಡವಿಯೊಳು ಕೆರೆತುಂಬಿ ಬತ್ತಿದಂತೆ
ಮಡದಿ ಮಕ್ಕಳಿಗೆಂದು ಒಡವೆ ವಸ್ತ್ರವ ಗಳಿಸೆ
ಹಿಡಿಯಲಾ ಯಮನವರ ಕಟ್ಟಿಗೊಳಗಾಗಿ

ಚಳಿ ಮಳೆಯ ಅತಿ ಕಾರುಗತ್ತಲೆಯೊಳಗೆ ಎದ್ದು
ಹೊಳೆಯೊಳಗೆ ಮುಳುಗಿ ಜಪ ತಪವ ಮಾಡಿ
ಕಳವಳಿಸಿ ನೂರೆಂಟು ಹಲುಬಿ ಬಳಲಲು ಬೇಡ
ನಳಿನಾಕ್ಷ ಆದಿಕೇಶವನ ನೆನೆ ಮನವೇ

**ಆಕರ: ಸಾವಿರಾರು ಕೀರ್ತನೆಗಳು**
**ಸಂಪಾದಕರು: ಪ್ರೊ. ಎ. ವಿ. ನಾವಡ**
**ಡಾ. ಗಾಯತ್ರಿ ನಾವಡ**





೧೯೯೦ರಲ್ಲಿ ಕನಕದಾಸರ ಭಾರತೀಯ ಅಂಚೆ ಇಲಾಖೆ ಹೊರತಂದ ಅಂಚೆಚೀಟಿ.

ಕನಕದಾಸರು 'ಜಪವ ಮಾಡಿದರೇನು' ಕೀರ್ತನೆಯನ್ನು ಕೇಳಲು ಈ QR ಕೋಡ್ ಸ್ಕ್ಯಾನ್ ಮಾಡಿ.

ಡಾ. ರಾಜಕುಮಾರ್ ಹಾಡಿರುವ ಕನಕದಾಸರ ಇನ್ನಷ್ಟು ಕೀರ್ತನೆಗಳನ್ನು ಕೇಳಲು ಈ QR ಕೋಡ್ ಸ್ಕ್ಯಾನ್ ಮಾಡಿ.

**ನಮ್ಮ ಆಶಯ:** ಕೊಟ್ಟಿರುವ ಕನಕದಾಸರ ಚಿತ್ರಕ್ಕೆ ಸೂಕ್ತ ಬಣ್ಣ ತುಂಬು. ಅವರ ಕೀರ್ತನೆಯನ್ನು ತರಗತಿಯಲ್ಲಿ ಗಟ್ಟಿಯಾಗಿ ವಾಚನ ಮಾಡು ಅಥವಾ ಹಾಡಲು ಪ್ರಯತ್ನಿಸು. ಕನಕದಾಸರ ಇನ್ನಷ್ಟು ಕೀರ್ತನೆಗಳನ್ನು ಸಂಗ್ರಹಿಸಿ ಓದು.

# ನಕ್ಷಾಚಟುವಟಿಕೆ



### ಧಾನ್ಯಗಳು

ಜೋಳ ..............................

ರಾಗಿ ..................................

ಭತ್ತ ...................................

ಗೋಧಿ ..............................

ನವಣೆ ..............................

ಸಜ್ಜೆ ...................................

ಸಾಮೆ .............................

ಕಡಲೆ ...............................

ಹೆಸರು ..............................

ಉದ್ದು .............................

ತೊಗರಿ ............................

ಮಡಿಕೆ .............................


ಅಲಸಂಧಿ ..........................

ಹುರುಳಿ ............................

**ನಮ್ಮ ಆಶಯ:** ಮೇಲೆ ಕೆಲವು ಧಾನ್ಯಗಳ ಪಟ್ಟಿಯನ್ನು ಕೊಡಲಾಗಿದೆ. ಅವುಗಳಲ್ಲಿ ದ್ವಿದಳ ಮತ್ತು ಏಕದಳ ಧಾನ್ಯಗಳನ್ನು ಗುರುತಿಸಿ ಗೆರೆ ಮೇಲೆ ಬರೆ. ನಕ್ಷೆಯಲ್ಲಿ, ಕೊಟ್ಟಿರುವ ಧಾನ್ಯಗಳು ಯಾವ ಯಾವ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯುತ್ತವೆ ಗುರುತಿಸಿ ಬರೆ. ಸಹಾಯಕ್ಕಾಗಿ ಪರಿಸರ ಅಧ್ಯಯನ ಪಠ್ಯಪುಸ್ತಕ ನೋಡು.

| ಭಾಷಾ ಚೌಕ |
| --- |
| ಏಕದಳಧಾನ್ಯ – **Cereal** (ಸೀರಿಯಲ್) |
| ದ್ವಿದಳಧಾನ್ಯ – **Pulse** (ಪಲ್ಸ್) |

# ಬಣ್ಣದಾಟ



**ದೀಪಾವಳಿ**

ನಾಡಿಗೆ ಬಂದಿತು ದೀಪಾವಳಿ
ನಮ್ಮ ಬೀದಿಗೆ ಬಂದಿತು ದೀಪಾವಳಿ
ಬಣ್ಣದ ಬೆಳಕನು ಎಲ್ಲೆಡೆ ಚೆಲ್ಲುತ
ಹರುಷವ ತಂದಿತು ದೀಪಾವಳಿ

ಬಗೆಬಗೆ ಬಣ್ಣದ ಕಾಮನಬಿಲ್ಲು
ಹೊಳೆಯುವುದೆಲ್ಲರ ಮನಮನದಲ್ಲೂ
ಗಗನಕೆ ಚಿಮ್ಮುವ ಹೂವಿನ ಬಾಣ
ನಕ್ಷತ್ರಗಳನ್ನು ಮರೆಸುವ ತಾಣ

ಮಿರಮಿರ ಮಿರುಗುವ ಬಣ್ಣದ ಉಡುಪಿನ
ಚಿಣ್ಣರ ಹರುಷದ ದೀಪಾವಳಿ
ಮನೆಮನೆಯಲ್ಲಿ ತನುಮನದಲ್ಲಿ
ಮುದವನು ತುಂಬುವ ದೀಪಾವಳಿ

ಬಣ್ಣದ ಬೆಳಕನು ಹರಿಸುವ ಹಬ್ಬ
ಅಬ್ಬಾ! ಆರ್ಭಟ ಮಾಡುವ ಹಬ್ಬ
ಕಣ್ಮನ ಸೆಳೆಯುವ ಮೋಹಕ ಹಬ್ಬ
ಹರುಷದ ಹೊಳೆಯನು ಹರಿಸುವ ಹಬ್ಬ

ವಾಮನ, ಬಲಿಯ ಪಾತಾಳಕೆ ತುಳಿಯುತ
ವರವನು ನೀಡಿದ ದೀಪಾವಳಿ
ಬಾಳಿನ ಕತ್ತಲೆ ದೂರಕೆ ದೂಡುವ
ಬೆಳಕಿನ ಹಬ್ಬವು ದೀಪಾವಳಿ


**– ಸಿ. ಎಮ್. ಗೋವಿಂದ ರೆಡ್ಡಿ**
**ಆಕರ: ಚಿಣ್ಣರ ಲೋಕದ ಬಣ್ಣದ ಹಾಡು**

**ನಮ್ಮ ಆಶಯ:**
ಮೇಲಿನ ಚಿತ್ರಕ್ಕೆ ನಿನಗಿಷ್ಟವಾದ ಬಣ್ಣ ಹಚ್ಚು. ದೀಪಾವಳಿ ಹಬ್ಬವನ್ನು ಆಚರಿಸಿದ/ನೋಡಿದ ನಿನ್ನ ಸಂಭ್ರಮವನ್ನು ಎಲ್ಲರೊಂದಿಗೆ ಹಂಚಿಕೊ. ಕೊಟ್ಟಿರುವ ಹಾಡನ್ನು ಕಲಿತು ಹಾಡಲು ಪ್ರಯತ್ನಿಸು.

**ಭಾಷಾ ಚೌಕ**

**ಹಬ್ಬ – Festival** (ಫೆಸ್ಟಿವಲ್)
**ಆಚರಣೆ – Celebration** (ಸೆಲೆಬ್ರೇಷನ್)
**ಪಟಾಕಿ – Cracker** (ಕ್ರ್ಯಾಕರ್)
**ಹಣತೆ – Lamp** (ಲ್ಯಾಂಪ್)

# ಕವನ ಪುಟ



## ಬೆಳಗು

ಮೂಡಲ ಮನೆಯಾ ಮುತ್ತಿನ ನೀರಿನ
ಎರಕವ ಹೊಯ್ದಾ
ನುಣ್ಣನೆ ಎರಕವ ಹೊಯ್ದಾ
ಬಾಗಿಲ ತೆರೆದೂ ಬೆಳಕು ಹರಿದೂ
ಜಗವೆಲ್ಲಾ ತೊಯ್ದಾ
ಹೋಯೋ ಜಗವೆಲ್ಲಾ ತೊಯ್ದಾ

ಎಲೆಗಳ ಮೇಲೇ ಹೂಗಳ ಒಳಗೇ
ಅಮೃತದ ಬಿಂದು
ಕಂಡವು ಅಮೃತದ ಬಿಂದು
ಯಾರಿರಿಸಿರುವರು ಮುಗಿಲ ಮೇಲಿಂ–
ದಿಲ್ಲಿಗೇ ತಂದು
ಈಗ ಇಲ್ಲಿಗೇ ತಂದು.

ಗಿಡಗಂಟೆಯಾ ಕೊರಳೊಳಗಿಂದ
ಹಕ್ಕಿಗಳ ಹಾಡು
ಹೊರಟಿತು – ಹಕ್ಕಿಗಳ ಹಾಡು
ಗಂಧರ್ವರಾ ಸೀಮೆಯಾಯಿತು
ಕಾಡಿನಾ ನಾಡು
ಕ್ಷಣದೊಳು ಕಾಡಿನಾ ನಾಡು

ಅರಿಯದು ಅಳವು ತಿಳಿಯದು ಮನವು
ಕಾಣದೋ ಬಣ್ಣಾ
ಕಣ್ಣಿಗೆ ಕಾಣದೋ ಬಣ್ಣಾ
ಶಾಂತಿರಸವೇ ಪ್ರೀತಿಯಿಂದಾ
ಮೈದೋರಿತಣ್ಣಾ
ಇದು ಬರಿ – ಬೆಳಗಲ್ಲೋ ಅಣ್ಣಾ

– **ಅಂಬಿಕಾತನಯದತ್ತ**

ಮುಕ್ತ ಕಲಿಕೆಗಾಗಿ

**ನಮ್ಮ ಆಶಯ:** ಮೇಲಿನ ಚಿತ್ರಕ್ಕೆ ಬಣ್ಣ ತುಂಬು. ಕೊಟ್ಟಿರುವ ದ. ರಾ. ಬೇಂದ್ರೆಯವರ ಕವನವನ್ನು ಗಟ್ಟಿಯಾಗಿ ವಾಚನ ಮಾಡು/ಹಾಡಲು ಪ್ರಯತ್ನಿಸು. ನಂತರ ಬೇಂದ್ರೆಯವರ ಕವನವನ್ನು ಸಂಗ್ರಹಿಸಿ ಖಾಲಿ ಜಾಗದಲ್ಲಿ ಬರೆ.

**ಭಾಷಾ ಚೌಕ**

**ಸೂರ್ಯೋದಯ – Sunrise** (ಸನ್‌ರೈಸ್)
**ಸೂರ್ಯಾಸ್ತ – Sunset** (ಸನ್‌ಸೆಟ್)

# ಕಲಾ–ಕೇತ್ರ....




**ಕರಡಿಮರಿ, ಜೇನು, ಜೇನುಹುಳು, ಮರ, ಭರಣಿ, ಕಾಡು**

**ನಮ್ಮ ಆಶಯ:** ಚಿತ್ರವನ್ನು ಗಮನಿಸಿ ಬಣ್ಣ ತುಂಬು. ಮೇಲೆ ಕೊಟ್ಟಿರುವ ಪದಗಳನ್ನು ಆಧರಿಸಿ ಖಾಲಿ ಜಾಗದಲ್ಲಿ ಒಂದು ಚಿತ್ರ ಬರೆದು ಬಣ್ಣ ತುಂಬು.

**ಭಾಷಾ ಚೌಕ**

**ಕಾಂಡ – Stem** (ಸ್ಟೆಮ್)
**ಜೇನುಹುಳು – Honey-bee** (ಹನಿ–ಬೀ)


# ಸವಾಲು



**ನಮ್ಮ ಆಶಯ:**
ಕೊಟ್ಟಿರುವ ಲೆಕ್ಕವನ್ನು ಗಮನಿಸು. ಅಷ್ಟೆ ಕಡ್ಡಿಗಳಿಂದ ಸಂಖ್ಯೆಗಳನ್ನು ಜೋಡಿಸು. ಆದರೆ ಲೆಕ್ಕ ತಪ್ಪಾಗಿದೆ. ಅದನ್ನು ಸರಿಪಡಿಸಲು ಒಂದು ಕಡ್ಡಿಯನ್ನು ಬದಲಿಸುವ ಮೂಲಕ ಲೆಕ್ಕವನ್ನು ಸರಿಪಡಿಸಬಹುದು. ಆ ಕಡ್ಡಿಯನ್ನು ಕಂಡುಹಿಡಿ.

ಖುಷಿ ಕಲಿಕೆಗಾಗಿ

# ಪೂರ್ಣದಡೆಗೆ




**ನಮ್ಮ ಆಶಯ:** ಕೊಟ್ಟಿರುವ ಚಿತ್ರವನ್ನು ಗಮನಿಸು. ನಂತರ ಅದನ್ನು ಪೂರ್ಣಗೊಳಿಸು. ಬಣ್ಣ ತುಂಬು.

| ಭಾಷಾ ಚೌಕ |
| --- |
| ಕಮಲ/ತಾವರೆ – Lotus (ಲೋಟಸ್) |



# ಬಣ್ಣದಾಟ




**ಸೂಚನಾ ಪಟ್ಟಿ**

**1 – ಗುಲಬಿ ಬಣ್ಣ**
**2, 9 – ನೀಲಿ ಬಣ್ಣ**
**3, 4 – ಹಳದಿ ಬಣ್ಣ**
**5, 9 – ಹಸಿರು ಬಣ್ಣ**
**6, 8 – ಬೂದು ಬಣ್ಣ**
**10 – ಕಂದು ಬಣ್ಣ**

ಖುಷಿ ಕಲಿಕೆಗಾಗಿ


**ನಮ್ಮ ಆಶಯ:** ಚಿತ್ರದಲ್ಲಿರುವ ಕಳೆಯುವ ಲೆಕ್ಕಗಳನ್ನು ಮಾಡು. ಬಂದ ಉತ್ತರಕ್ಕೆ ಸೂಚನಾ ಪಟ್ಟಿಯಲ್ಲಿ ಸೂಚಿಸಿದಂತೆ ಬಣ್ಣ ತುಂಬು. ನಂತರ ಖಾಲಿ ಜಾಗದಲ್ಲಿ ನಿನಗೆ ಇಷ್ಟವಾದ ಚಿತ್ರ ಬರೆದು ಬಣ್ಣ ತುಂಬು. ಅನಂತರ ಚಿತ್ರದ ಕುರಿತು ತರಗತಿಯಲ್ಲಿ ಮಾತನಾಡು.


# ಕರಕುಶಲ ಚಟುವಟಿಕೆ

## ಕಾಗದ ಮನೆ

**ನಮ್ಮ ಆಶಯ:**
ಸೂಚನೆಗಳಂತೆ ಮನೆಯನ್ನು ಮಾಡಲು ಪ್ರಯತ್ನಿಸು.

* ಮನೆ ಮತ್ತು ಮಾಳಿಗೆಯ ಚಿತ್ರಗಳನ್ನು ಎಚ್ಚರಿಕೆಯಿಂದ ಸರಿಯಾಗಿ ಕತ್ತರಿಸಿಕೊ.
* ಮನೆಗೆ ಮತ್ತು ಮಾಳಿಗೆಗೆ ಬಣ್ಣ ಹಾಕಿ.
* ದಪ್ಪ ಗೆರೆಗಳ ಗುಂಟ ಮಡಿಸು.
* ಅಂಟು ಹಾಕು ಎಂದಲ್ಲಿ ಅಂಟು ಹಾಕಿ, ಅಂಟಿಸು. ಮನೆ ಸಿದ್ಧಗೊಳಿಸು.
* ಸಿದ್ಧಗೊಳಿಸಿದ ಮನೆಯ ಬಗ್ಗೆ ತರಗತಿಯಲ್ಲಿ ಮಾತನಾಡು.





# ಬಣ್ಣದಾಟ



ಸುಂದರಬನ ಕಲಿಕೆಗಾಗಿ

**ನಮ್ಮ ಆಶಯ:** ಮೇಲಿನ ಚಿತ್ರಕ್ಕೆ ಸೂಕ್ತ ಬಣ್ಣ ತುಂಬು. ನಂತರ ಖಾಲಿ ಜಾಗದಲ್ಲಿ ಕರ್ನಾಟಕ ಮಾತೆಯ ಚಿತ್ರ ಬರೆದು ಬಣ್ಣ ತುಂಬು. ನಿನ್ನ ಶಾಲೆಯಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸಿದ್ದರ ಕುರಿತು ಶಾಲೆ/ಮನೆಯಲ್ಲಿ ಮಾತನಾಡು.

# ಕಥಾಸಮಯ




**ನಮ್ಮ ಆಶಯ:** ಮೇಲಿನ ಚಿತ್ರಗಳನ್ನು ಗಮನಿಸು. ಚಿತ್ರಗಳಿಗೆ ತಕ್ಕಂತೆ ಒಂದು ಕಥೆಯನ್ನು ಕಟ್ಟಿ ಹೇಳು. ಆ ಕಥೆಯನ್ನು ಬೇರೊಂದು ಹಾಳೆಯಲ್ಲಿ ಬರೆ. ನಂತರ ಕಥೆಗೆ ಸೂಕ್ತ ಹೆಸರು ಕೊಡು. ಸಾಧ್ಯವಾದರೆ ಬೇರೆಯವರಿಗೂ ಆ ಕಥೆಯನ್ನು ಹೇಳು.

# ಕಣ್ಣರಳಿಸಿ ನೋಡು





ಖುಷಿ ಕಲಿಕೆಗಾಗಿ



# ನೋಡು ಮಾಡು


ಸಾಂದರ್ಭಿಕ ಚಿತ್ರಗಳು

**ನಮ್ಮ ಆಶಯ:** ಕೊಟ್ಟಿರುವ ಚಿತ್ರಗಳನ್ನು ಗಮನಿಸು. ಅದರಂತೆ ನೀನು ಬಣ್ಣದ ಕಾಗದಗಳನ್ನು ಬಳಸಿಕೊಂಡು ಸಾಂತಾಕ್ಲಾಸ್‌ನನ್ನು ತಯಾರಿಸು.

'ಧ್ವನಿ' ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ
ಉಚಿತ ಹಂಚಿಕೆಗಾಗಿ

ಇಲ್ಲಿನ ಕೆಲವು ಚಿತ್ರಗಳನ್ನು ವಿವಿಧ ಅಂತರ್ಜಾಲ ತಾಣಗಳಿಂದ ಕೃತಜ್ಞತಾಪೂರ್ವಕವಾಗಿ ತೆಗೆದುಕೊಂಡು ಅಗತ್ಯಕ್ಕೆ ತಕ್ಕಂತೆ ಅಳವಡಿಸಿಕೊಳ್ಳಲಾಗಿದೆ.


**ಸಂಪರ್ಕ ಮಾಹಿತಿ**
ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
# 76, 'ಪುಷ್ಪಾಂಜಲಿ' 3ನೇ ಅಡ್ಡರಸ್ತೆ,
ಶಿವಗಿರಿ, ಧಾರವಾಡ 580 007
ಮೊ: 99866 61055
dhwanitrust@gmail.com,
www.dhwanitrust.org



ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.